ಅವರ ಡಿಪಾರ್ಟ್‌ಮೆಂಟಿನ ಪುಟ್ಟ ಕಂಪಾರ್ಟ್‌ಮೆಂಟಿನಲ್ಲಿ ಅಂದು ಕಳೆದ ಕ್ಷಣಗಳು ನಮ್ಮನ್ನು ಅಣ್ಣತಮ್ಮಂದಿರನ್ನಾಗಿ ಬದಲಿಸಿದವು, ಕೊನೆಯವರೆಗೂ ನನ್ನನ್ನು ತಮ್ಮ 'ಸಿದ್ಧಲಿಂಗ ಅವರs' ಮಾಡಿಕೊಂಡುಬಿಟ್ಟರು.

'ಮುಕ್ತಿ'ಯ ನನ್ನ ಹಲುಬುವಿಕೆ–ನರಳುವಿಕೆ ಹೇಳಿಕೊಂಡೆ. ಮನಸಾರೆ ನಕ್ಕುಬಿಟ್ಟರು. "ಅದು ನಂದs ಕಥೀರೀs. ನಿಮ್ಮ ಕಥಿ ಅಂತೀರೀ ಅಂದಮ್ಯಾಲ, ನೀವೂ ಆ ಎಲ್ಲಾ ಜಾಗಾ, ಪಾಜೇಗಟ್ಟಿ ಸುತ್ತಾಡೀರಿ ಅಂದಂಗಾತು. ಬರೊಬ್ಬರ ಆತು ತೊಗೊರ್‍ರಿ" ಅಂದರು. "ಅದನ್ನ ಬರಿಯೂತನಕಾ ನನಗೂ ಮುಕ್ತಿನs ಸಿಗದಂಗಾಗಿತ್ತು. ನಾಕಾರ ಸರ್ತೆ ಬ್ಯಾರೆಬ್ಯಾರೆ ನಮೂನಿಲೆ ಬರದೆ. ಸಮಾಧಾನ ಆಗಲಿಲ್ಲ, ಕಡೀಕ ಈ ಡೈರೀನs ಸರಿ ಅನಿಸಿತು, ಬರದ ಹಗುರಾಗಿದ್ದೆ" ಅಂದರು. ಅಲ್ಲಿಯ ಕಾಮಿನಿ, ಕಾತ್ಯಾಯನಿ, ಡೊಲಿ, ಗೌರೀಶರಂಥವರು ನಮ್ಮನ್ನು ಆವರಿಸಿರದಿದ್ದರೆ ನಾವು ಲೇಖಕರೇ ಆಗುತ್ತಿರಲಿಲ್ಲ ಅನ್ನಿಸಿತು.

ಶಾಂತಿನಾಥರು ಮಾಳಮಡ್ಡಿಯ ಪತ್ರಾವಳಿಯವರ ಮನೆಯಲ್ಲಿ ಇದ್ದಾಗಿನ ದಿನಗಳು. ಶಾಂತಿನಾಥರ ಕತೆಗಳ ಮತ್ತು ನನ್ನ ಕವಿತೆಗಳ ಒಡನಾಟ ಹೆಚ್ಚಿತು. ವಾರಕ್ಕೆ 2–3 ಸಲವಾದರೂ ಸಂಜೆ, ರಾತ್ರಿ ಕೂಡುತ್ತಿದ್ದೆವು. ತಮ್ಮ ಕತೆಗಳನ್ನು ಓದಿ ತೋರಿಸುತ್ತಿದ್ದರು. ಅಂಥ ಪ್ರಸಂಗದಲ್ಲಿ ನಮ್ಮ ನಮ್ಮ ಸ್ನೇಹಿತರು, ಸಹೋದ್ಯೋಗಿಗಳು, ಸಖಿಯರು ಇತ್ಯಾದಿ 'ಒಳಗೆ ಕೇಳಿಸದಂತೆ' ಮಾತಾಡುತ್ತಿದ್ದೆವು. " 'ಸೃಷ್ಟಿ' ಕಾದಂಬರಿಯ ಹೊಳಹು ಮೂಡಿದ್ದು ಆಗಲೇ. ಬಹುಶಃ ಅದರ ಒಂದೊಂದು ಪುಟವನ್ನೂ ನಾವಿಬ್ಬರೂ ಕಣ್ಣು, ಮನಸ್ಸಿನಲ್ಲಿ ಸೃಷ್ಟಿಸಿಕೊಂಡಿದ್ದೇವೆ. ಯಾವ ವಿಷಯ, ವಸ್ತು, ಏನನ್ನಾದರೂ ದೇಸಾಯರು ಮೊದಲೇ ಯೋಚಿಸುತ್ತಿದ್ದರು, ಸ್ಕೆಚ್ ಹಾಕಿಕೊಂಡು, ನೋಟ್‌ಬುಕ್‌ನಲ್ಲಿ ನಿಧಾನ ಬರವಣಿಗೆಗೆ ತೊಡಗುತ್ತಿದ್ದರು. ಆದರೂ ಕೆಲವು ಪಾತ್ರ, ಪ್ರಸಂಗ ಒಮ್ಮೊಮ್ಮೆ ಅತ್ತಿತ್ತ ಅತಿಕ್ರಮಣ ಮಾಡುತ್ತಿದ್ದುವು. ಅಂಥ ಹೊತ್ತಿನಲ್ಲಿ ನನ್ನ ವಿಮರ್ಶನ ಚಿಕಿತ್ಸೆ ಅವರಿಗೆ ನೆರವಾಗುತ್ತಿತ್ತು. ಕೊನೆಗೆ 'ಸೃಷ್ಟಿ'ಗೆ ಪ್ರೇರಣೆ ಕೊಟ್ಟವರು ನೀವು. ಅದಕ್ಕೆ ನೀವೇ ಬೆನ್ನುಡಿ ಬರೀರಿ" ಅಂದರು. "ಕತಿ, ಕಾದಂಬರಿ, ವಿಮರ್ಶೆಯೊಳಗ ಹೆಸರು ಮಾಡಿಕೊಂಡವರು ಇದ ಊರಾಗ ಬೇಕಾದಷ್ಟು ಮಂದಿ ಅದಾರು, ಅಂಥಾವರು ಬರೀಲಿ" ಅಂದೆ. "ಅದೆಲ್ಲಾ ನನಗ ಗೊತ್ತು. 'ಸೃಷ್ಟಿ'ಯೊಳಗ ಕಣ್ಣುಮುಚ್ಚಾಲೆ ಆಡುವ ನಾಟಕಸೃಷ್ಟಿ ನಿಮ್ಮ ಹೊರತು ಬ್ಯಾರೇದವರಿಗೆ ಕಾಣೂದಿಲ್ಲ." ಅಂದರು. ಬರೆದುಕೊಟ್ಟೆ. ಅವರ ಒತ್ತಾಸೆ ನನಗೆ ನೀಡಿದ ಗೌರವವಾಗಿತ್ತು.

ಒಮ್ಮೆ "ಒಬ್ಬ ಕತೆಗಾರ್ತಿ ನಿಮ್ಮ ಬಗ್ಗೆನೇ ಒಂದು ಕಾದಂಬರಿ ಬರದಾಳಂತಲ್ಲರೀ ಸರ್?" ಅಂದೆ. "ಓಹ್ ಅದs!" ಶಾಂತಿನಾಥರಿಗೆ ನಾನು ಅವರ ಕನ್ನಡಿಯಂತಿದ್ದೆ. "ನನ್ನ ಕಾದಂಬರಿ ಅಥವಾ ಕತೆಗಳಲ್ಲಿ ಮೂಡಿ ಬಂದಾರಲ್ಲ, ಆ ಹುಡಿಗ್ಯಾರು ಯಾರಾದರೂ ಬರೆದಿದ್ದರ ಒಂದೀಟ ಮಜಾ ಇರತಿತ್ತರೆಪಾ...! ಇದೇನಲ್ಲ ಬಿಡಿರಿ, ಇಲ್ಲಿ ಕಲಿಸಿರತೇನಲ್ಲ, ವರ್ಷಾ 3–4 ಮಂದಿ ಹಿಂಗ ಬರೀತಾರು. ಪ್ರ್ಯಾಕ್ಟೀಸ್ ಮಾಡಿಕೋತಿರತಾರು" ಅಂದರು. "ಏನು ಪ್ರ್ಯಾಕ್ಟೀಸು?" ಎಂಬ ನನ್ನ ಚೇಷ್ಟೆಗೆ ಅವರ ಮುಗುಳುನಗೆಯೇ ಉತ್ತರವಾಗಿತ್ತು.

ಅಡಿಗರ 'ಸಾಕ್ಷಿ'ಯಲ್ಲಿ ನನ್ನ ಕತೆ 'ಹಕ್ಕಿಗಳು' ಪ್ರಕಟವಾಗಿತ್ತು. ಅದನ್ನು ಓದಿ, ಕುತೂಹಲದಿಂದ ದೇಸಾಯರು, "ನಿಮಗ ಈ ತತ್ವಣಗಿ, ಮಾವಿನಕೊಪ್ಪ, ಸಿದ್ದೀಮಂದಿ, ಅಡವಿ–ಪಡವಿ ಹೆಂಗ ಗೊತ್ತು?" ಕೇಳಿದರು. "ನಾ ಹಳ್ಳಿಯೊಳಗs ಬೆಳದ್ಹಾವ. ಮತ್ತ, ತತ್ವಣಗೀ ಆಸ್ತಿಗೆ ನಮ್ಮ ಸ್ವಾದರಮಾವ ಗುರುಪಾದಪ್ಪ ದತ್ತಕ ಹೋಗ್ಯಾನು. ಈಗ ಅದನ್ಯಾಕ ಕೇಳಿದಿರಿ?" ಅಂದೆ. "ನಾವು ಹಳಿಯಾಳ ದೇಸಾಯರು. ನಮ್ಮ ಜಮೀನು ತತ್ವಣಗಿ ಕಡೇನೂ ಅದಾವು" ಅಂದರು. ಆವತ್ತು ನಮಗಿಬ್ಬರಿಗೂ ಹಬ್ಬ. ತತ್ವಣಗಿಯ ಇನ್ನಷ್ಟು ವಿವರಗಳನ್ನು ಹೇಳಿದೆ, ಅವರೂ ಮಾತಾಡಿದರು. ಕಡೆಗೆ, "ಇದು ಭಾಳ